# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಹರಿಭಕ್ತ ಅಂಬರೀಷ

ಕವಿ

## ಮಧೂರು ವೆಂಕಟಕೃಷ್ಣ


ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಮಹಾಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಸಂಕರ್ಷಣ ಪ್ರಕಾಶನ, ಮಧೂರು

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೦೮

**ಪಾತ್ರಗಳು:**

ಅಂಬರೀಷ, ನಾರದ, ಮಹಾವಿಷ್ಣು, ದೇವೇಂದ್ರ, ದುರ್ವಾಸ, ಸುದರ್ಶನ, ಅಂಬರೀಷನ ಪತ್ನಿ, ಕೃತ್ಯ (ದುಷ್ಟದೇವತೆ), ವಸಿಷ್ಠ, ಬ್ರಹ್ಮ, ಈಶ್ವರ

**ಕಥಾ ಸಾರಾಂಶ:**

ಇಕ್ಷ್ವಾಕು ಕುಲದಲ್ಲಿ ನಭಾಗನ ಪುತ್ರನಾಗಿ ಹುಟ್ಟಿದ ಅಂಬರೀಷನ ಹರಿಭಕ್ತಿಪಾರಮ್ಯದ ಮನೋಜ್ಞ ಪ್ರಸಂಗ. ನಾರದರ ಉಪದೇಶದಂತೆ ಏಕಾದಶಿ ವ್ರತವನ್ನು ಆಚರಿಸಿ, ಶ್ರೀ ಹರಿಯ ಕರುಣೆಯಿಂದ ಸುದರ್ಶನ ಚಕ್ರವನ್ನು ರಕ್ಷಾರ್ಥವಾಗಿ ಪಡೆಯುತ್ತಾನೆ. ಇಂದ್ರನಿಂದ ಪ್ರೇಷಿತನಾದ ಮುನಿ ದುರ್ವಾಸರು ಅಂಬರೀಷನನ್ನು ಪರೀಕ್ಷಿಸಲು ಹೋಗಿ ತಾವೇ ಚಕ್ರದ ಆಗ್ರಹಕ್ಕೆ ಸಿಲುಕಿ ನಂತರ ರಾಜನ ಮೊರೆಹೊಕ್ಕು ಪಾರಾದ ಕಥೆ.

**ಕವಿ ಪರಿಚಯ : (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಮಧೂರು ವೆಂಕಟಕೃಷ್ಣರವರು ೧೯೪೦ರಲ್ಲಿ ಕಾಸರಗೋಡಿನ ಮಧೂರಿನಲ್ಲಿ ಜನಿಸಿದರು. ತಂದೆ ಮಾಧವ ಭಟ್ಟ ಮತ್ತು ತಾಯಿ ಮಹಾಲಕ್ಷ್ಮಿ. ಆದಾಯ ತೆರಿಗೆ ಇಲಾಖೆಯಲ್ಲಿ ಅಧಿಕಾರಿಯಾಗಿ ನಿವೃತ್ತರಾದವರು. ಸಂಗೀತ, ಹರಿಕಥೆ, ಯಕ್ಷಗಾನ ಹೀಗೆ ವೈವಿಧ್ಯ ಆಸಕ್ತಿ ಹೊಂದಿದ ವೆಂಕಟಕೃಷ್ಣರವರು ೨೧ ಯಕ್ಷಗಾನ ಪ್ರಸಂಗಗಳ ಕೊಡುಗೆ ನೀಡಿದ್ದಾರೆ.

ಇವರು ಬರೆದ ಪ್ರಸಂಗಗಳು: ವೈಶಾಲಿನಿ ಪರಿಣಯ, ದೂರ್ವಾಸಾತಿಥ್ಯ, ಶ್ರೀ ಮಧೂರು ಕ್ಷೇತ್ರ ಮಹಾತ್ಮೆ, ಶ್ರೀ ಮುಗೇರು ಕ್ಷೇತ್ರ ಮಹಾತ್ಮೆ, ಶ್ರೀ ಧರ್ಮಸ್ಥಳ ಕ್ಷೇತ್ರ ಮಹಾತ್ಮೆ, ಧನ್ವಂತರಿ ಮಹಾತ್ಮೆ, ಶ್ರೀಸತ್ಯನಾರಾಯಣ ವ್ರತಮಹಾತ್ಮೆ, ನಂದಗೋಕುಲದ ಪೊರ್ಲ್, ಶ್ರೀ ಕುಂಟಾರು ಕ್ಷೇತ್ರಮಹಾತ್ಮೆ, ಶ್ರೀ ಕಾಟುಕುಕ್ಕೆ ಕ್ಷೇತ್ರಮಹಾತ್ಮೆ, ಶ್ರೀ ಗುರುವಾಯೂರು ಕ್ಷೇತ್ರಮಹಾತ್ಮೆ, ಸೌಭಾಗ್ಯ ಚಂದನ, ಮಾಂಗಲ್ಯಭಾಗ್ಯ, ಕಾಂಚನ ಕಾಮಾಕ್ಷಿ, ಪಾವಮಾನಿಯ ಪ್ರಣಯಲೀಲೆ, ಬಂಡಿಹೊಡೆದ ಗಂಡುಗಲಿ, ಬಳ್ಳಂಬೆಟ್ಟು ಕ್ಷೇತ್ರಮಹಾತ್ಮೆ, ನದಿಯಾಗಿ ಹರಿದ ನಂದಿನಿ, ದುಂಬಿಯಾಗಿ ನೆಗೆದ ಭ್ರಾಮರಿ ಪಾಪನಾಶಿನೀ ಸರಸ್ವತೀ, ಹರಿಭಕ್ತ ಅಂಬರೀಷ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಪಂತುವರಾಳಿ - ರೂಪಕ**
ಮಧುಪುರೇಶನಿವನು ಏಕ | ರದನ ನೋಡಿರಿ ||
ಮದನ ಹರನ ಸುತನ ಚೆಲುವ ವದನ | ನೋಡಿರೀ ||
ಮಧುರ ಭೋಜ್ಯವನ್ನು ಮೆಲುವ |
ಚದುರನೀತ ಶಿವನ ದಿವ್ಯ |
ಸದನದೊಳಗೆ ಗೋಡೆಯಲ್ಲಿ | ಉದಿಸಿದಾತನು ||
ವಿಧುವ ಶಪಿಸಿದವನು ಸಿದ್ಧಿ |
ಪ್ರದನು ವಿಘ್ನಹರನು ಅವನ |
ಪದವ ನೆನೆದರೊಡನೆ ಬಂದು | ಮುದವನೀವನು || ೧ || 1 ||

**ಕಾಂಬೋಧಿ - ಝಂಪೆ**
ಇಕ್ಷ್ವಾಕು ವಂಶ ಸಂರಕ್ಷಕರ ಪಂಕ್ತಿಯನು |
ವೀಕ್ಷಿಸಲು ಅಂಬರೀಷಾಖ್ಯ ||
ಶಿಕ್ಷಿತನು ಜನಹಿತಾಪೇಕ್ಷೆಯುಳ್ಳವನು ಅತಿ |
ದಕ್ಷ ನೃಪ ಹರಿಶರಣಮುಖ್ಯ || ೧ ||

ವಾರಿಧಿಯ ತನಕ ವಿಸ್ತಾರವಾದವನಿಯಲಿ |
ಶೂರತೆಯ ಮೆರೆಸಿ ಭೂಭುಜರ ||
ವಾರವನು ಗೆಲಿದು ಬಂಗಾರ ಸಂಪತ್ತುಗಳ |
ವಾರಕವ ಪಡೆದ ರಣಧೀರ || ೨ ||

ಸುಖ ದು:ಖವೆರಡರಲಿ ವಿಕಳನಾಗದೆ ಹರಿಯ |
ಭಕುತಿಯನು ಮನದಿ ನೆಲೆಗೊಳಿಸಿ ||
ನಿಖಿರತತ್ವವನಾಂತು ಸಕಲರಲಿ ಸಮತೆಯನು |
ಮುಖಜರಲಿ ಗೌರವವನಿರಿಸಿ || ೩ || 4 ||

**ಭಾಮಿನಿ**
ಈ ಧರೆಯ ಸುಖಭೋಗಗಳು ಪರ |
ಸಾಧನೆಗೆ ತೊಡಕೆಂಬ ನಿಲುವನು |
ಆಧರಿಸಿ ನಾಭಾಗ ಸುತನು ತದೇಕ ಚಿತ್ತದಲಿ ||
ಶ್ರೀಧರನ ನೆನೆಯುತ್ತಲಿರೆ ಸ |
ಮ್ಮೋದದಲಿ ಅವನೆಡೆಗಧರ್ಮದ |
ಬೋಧಕನು ಸುರಮುನಿಪ ನಾರದ ಬಂದನೊಲವಿನಲಿ || ೧ || 5 ||

**ಕೇದಾರಗೌಳ - ಅಷ್ಟ**
ಸುರಮುನಿಪನ ಬರವರಿತು ರಾಜೇಂದ್ರನು |
ಹರಿಪೀಠವನು ತೊರೆದು ||
ಗುರುಭಾವದಿಂದ ಬಂದೆರಗಿ ಸಂತಸದಿಂದ |
ಚರಣಪೂಜೆಯ ಗೈದನು || ೧ ||

ಸಾಕರಿಸಿತು ದಿವ್ಯ ಪಾದ ಪೂರೈಸಿ ತ್ರೈ |
ಲೋಕ ಸಂಚಾರವನು ||
ಬೇಕೇನು ತನಗಿನ್ನು ಧನ್ಯನೆಂದೆರಗಲು |
ಭೂಕಾಮಿನೀ ವರನು || ೨ ||

ಅಂಬುಜೋದ್ಭವಪುತ್ರ ತುಂಬುತುತ್ಸಾಹವ |
ಅಂಬರೀಷನೊಳೆಂದನು ||
ಕುಂಭಿನಿ ಹರಿಯ ಆಡುಂಬೊಲವೆಂಬುದ |
ನಂಬಿದ ಭಕುತ ನೀನು || ೩ || 8 ||

**ಬೇಗಡೆ - ಏಕ**
ತುರಗ ಮೇಧವ ಗೈದು ಶ್ರೀಹರಿಯ | ವರ ದಿವ್ಯ ಚರಣವ |
ಪರಿಕಿಸಲು ಹಾತೊರೆವ ಮಹನೀಯ ||
ಒರೆವೆ ನಾ ನಿನಗೊಂದುಪಾಯವ |
ಪರಮ ದ್ವಾದಶಿ ವ್ರತವ ಮಾಡಲು |
ಹರಿದು ಪೋಪುದು ಪಾಪ ರಾಶಿಯು |
ನಿರತ ಸನ್ಮಂಗಲವು ಕೇಳೆನೆ || ೧ || 9 ||

**ಸೌರಾಷ್ಟ್ರ - ತ್ರಿವುಡೆ**
ಸತ್ವರದೊಳಾ ಹರಿಯ ಕಾಂಬ ಮ |
ಹತ್ತರದ ವ್ರತ ವಿಧಿಗಳನು ತಾ |
ವಿತ್ತರುಪಕೃತಿ ಎನ್ನಲಾಮುನಿ | ಉತ್ತರಿಸಿದ || ೧ || 10 ||

**ವಾರ್ಧಕ**
ಮೇದಿನಿಪ ಕೇಳೆರಡು ಪಕ್ಷದೊಳು ಬರುವ ಏ |
ಕಾದಶೀ ತಿಥಿಗಳನು ಮೊದಲು ನೀನಾಚರಿಸಿ |
ಆ ದಿನದೊಳಿದ್ದು ಜಾಗರಣೆಯಲಿ ಮರುದಿವಸ ತುಳಸಿ ಪುಷ್ಪಾರ್ಚನೆಯಲಿ ||
ಮೋದಗೊಳಿಸಾ ಹರಿಯ ಪಾದತೀರ್ಥವ ಕೊಂಡು |
ದ್ವಾದಶಿಯ ಪಾರಣೆಯ ಮಾಡುತೀಪರಿ ವ್ರತವ |
ಸಾಧಿಸಲು ಕೈವಲ್ಯ ಸುಲಭವಹುದೆನಲೆಂದ ಕೈಮುಗಿದು ಅಂಬರೀಷ || ೧ || 11 ||

**ಕೇದಾರಗೌಳ - ಝಂಪೆ**
ಪಕ್ಷದೊಳೆರಡು ದಿವಸ | ಬಹ ವ್ರತದ |
ದೀಕ್ಷೆಯಿಂ ಶ್ರೀನಿವಾಸ ||
ವೀಕ್ಷಿಸಲು ಮೈತಳೆವನೆ | ಮನಸಿನಾ |
ಪೇಕ್ಷೆಯೀಡೇರಿಸುವನೆ || ೧ ||

ನಿಷ್ಠೆಯಲಿ ಹರಿದಿನದೊಳು | ನೀ ವ್ರತಾ |
ನುಷ್ಠಾನ ಮಾಡುತಿರಲು ||
ವಿಷ್ಟರಶ್ರವ ದರುಶನ | ವಿತ್ತು ಸಂ |
ತುಷ್ಟಿಪಡಿಸುವನೊಂದಿನ || ೨ ||

ಯೋಚಿಸದೆ ಭಕುತಿಯಿಂದ | ವ್ರತವ ನೀ |
ನಾಚರಿಸು ಶ್ರದ್ಧೆಯಿಂದ ||
ಗೋಚರಿಸುವನು ಮಾಧವ | ಎನುತ ಮುನಿ |
ಸೂಚಿಸುತಲೇರೆ ನಭವ || ೩ || 14 ||

**ಭಾಮಿನಿ**
ಅಚಲ ನಿಷ್ಠೆಯ ತಳೆದು ಭೂಪತಿ |
ಖಚಿತ ಸಮಯವು ಮೀರದಂದದಿ ||
ರಚಿಸುತಿದ್ದನು ವ್ರತವ ಸಂವತ್ಸರದ ಪರಿಯಂತ ||
ಸುಚರಿತನು ದ್ವಾದಶಿಯ ದಿನ ದ್ವಿಜ |
ನಿಚಯವನು ಸಂತುಷ್ಟಿಗೊಳಿಸುತ |
ಉಚಿತ ರೀತಿಯೊಳವರ ಮನ್ನಿಸುತಿರಲು ಹರಿದಯದಿ || ೧ || 15 ||

**ಕಲ್ಯಾಣಿ - ಝಂಪೆ**
ಎಸೆವ ಕೌಸ್ತುಭ ಮಣಿಯ ಹಾರ ಕುಂಡಲವ |
ಹಸನಾದ ವನಮಾಲೆ ಗದೆ ಸುದರ್ಶನವ ||
ಬಿಸಜ ಶಂಖಾದಿಗಳ ಧರಿಸಿ ಲಕ್ಷ್ಮೀಶ |
ನಸುನಗುತ ಮೈದೋರಿ ನಿಲಲಂಬರೀಷ || ೧ || 16 ||

**ಕಾಪಿ - ಅಷ್ಟ**
ಅಕಲಂಕ ಚರಿತ ಸಂಪನ್ನ | ನೀನೇ |
ಸಕಲ ಜೀವಾತ್ಮರೊಳಿರುವ ಚೈತನ್ಯ ||
ಭಕುತನ ಮೇಲೆ ಕಾರುಣ್ಯ | ಭಾವ |
ವಿಕಸನಗೊಂಡುದರಿಂದ ನಾ ಧನ್ಯ || ೧ || 17 ||

**ಸೌರಾಷ್ಟ್ರ - ತ್ರಿವುಡೆ**
ಕೇಳಿ ನಸುನಗುತೆಂದ ಲಕ್ಷ್ಮೀ |
ಲೋಲ ನಿನ್ನಯ ಮನದಪೇಕ್ಷೆಯ |
ಪೇಳೆನಲು ಗದಗದಿಸುತೆಂದ ನೃ | ಪಾಲನಾಗ || ೧ ||

ಹರಿಯೆ ತವ ಕೀರ್ತನೆಯ ಸ್ಮರಣೆಯ |
ಚರಣ ಪೂಜೆಯ ಮನವ ನೆನ್ನಲಿ |
ನಿರತ ನೆಲೆಗೊಳಿಸಂತ್ಯದಲಿ ಕೊಡು | ಪರಮ ಪದವ || ೨ ||

ಭಂಗ ಬರದಿರಲೆರಡು ಸಲ ಬಹ |
ತಿಂಗಳಿನ ವ್ರತಗಳಿಗೆ ದೈನಿಕ |
ಸಂಗತಿಗೆ ಎನಲೆಂದ ನಾ ಶ್ರೀ | ರಂಗ ನಗುತ || ೩ || 20 ||

**ತೋಡಿ - ಅಷ್ಟ**
ಮೆಚ್ಚಿದೇ | ಭೂಪ | ಮೆಚ್ಚಿದೇ || ಪ ||
ನಿಚ್ಚಳ ಮನದಿಂದ ಗೈವಾರಾಧನೆಗೆ |
ಬೆಚ್ಚುವರೆಲ್ಲರು ನಿನ್ನ ಮೇಲೆರಗೆ || ಅ.ಪ ||
ಅನುದಿನ ನೀನೆನ್ನ ನಾಮ ಸಂಸ್ಮರಿಸು |
ಮುನಿಯೆಂದ ತೆರದಲ್ಲಿ ವ್ರತವನಾಚರಿಸು ||
ನಿನಗೀವೆ ನಾ ಸುದರ್ಶನ ಚಕ್ರವನ್ನು |
ನೆನೆದಾಗ ನೆರವೀವ ಎನ್ನಾಯುಧವನು || ೧ ||

ಎಂದಾದರೆರಗಿ ಬಂದರೆ ಛಲವಿಡಿದು |
ಇಂದ್ರಾದ್ಯರನು ಸಹ ಬೆನ್ನಟ್ಟದಿರದು ||
ಸಂದೇಹಗೊಳ್ಳದಿರೆಂದು ಚಕ್ರವನು |
ಇಂದಿರಾ ರಮಣ ಕೈಯೆತ್ತಿ ನೀಡಿದನು || ೨ || 22 ||

**ಭಾಮಿನಿ**
ಆ ದಯಾಮಯನಾ ಸುದರ್ಶನ |
ಮೇದಿನೀಶನಿಗಿತ್ತು ಕಣ್ಮರೆ |
ಯಾದ ತತ್ ಕ್ಷಣ ಅಂಬರೀಶನು ವಿರಹ ದು:ಖದಲಿ ||
ರೋದಿಸುತ ತಂದದನು ತನ್ನಾ |
ರಾಧನಾ ಗೃಹದಲ್ಲಿರಿಸಿ ಪೂ |
ಜಾದಿಗಳನೆಸಗುತ್ತಲಿರೆ ಸದ್ಭಕ್ತಿಭಾವದಲಿ || ೧ || 23 ||

**ಭೈರವಿ - ಝಂಪೆ**
ಅಮರ ಸಭೆಯಲಿ ಶಚೀ | ರಮಣ ರಂಜಿಸಿದನಾ |
ಸುಮನರಸ ಮಧ್ಯದಲಿ | ಅಮರ ಪೀಠದಲಿ ||
ಅಮಿತ ಸಂತಸದಿಂದ | ವಿಮಲೆಯರ ನಾಟ್ಯವನು |
ಗಮನಿಸುತ ಭ್ರಮೆಗೊಂಡ | ಸಮಯ ಸಂಭ್ರಮದಿ || ೧ ||

ಬಂದನಾ ನಾರದನು | ಇಂದ್ರನಿರುವೆಡೆಗಾಗಿ |
ಮುಂದಾಹ ಕಾರ್ಯವನು ಗ್ರಹಿಸಿ ||
ಚಂದದಿಂದಲಿ ಸುರಪ | ಬಂದವನನಾದರಿಸಿ |
ಸಂದೇಹಗೊಳುತೆಂದ ನಮಿಸಿ || ೨ || 25 ||

**ಕೇದಾರಗೌಳ - ಅಷ್ಟ**
ಪರಮ ಯೋಗೀಂದ್ರನೆ ಸುರರಭ್ಯುದಯವನ್ನೇ |
ನಿರತ ಚಿಂತಿಸುತಿರುವ ||
ಗುರುವರ್ಯ ಬರವೇನು ಅರುಹಿ ನೀವೆನಲೆಂದ |
ಸುರಮುನಿ ನಸುನಗುತ || ೧ || 26 ||

**ಬೇಗಡೆ - ಅಷ್ಟ**
ಲಾಲಿಸೆಲೆ ಸುರಪಾಲ ಸಂಗತಿಯ | ನಾ ಭಾಗಸುತ ಭೂ |
ಲೋಲ ವೆಗ್ಗಳ ಅಂಬರೀಷಾಖ್ಯ ||
ಶೀಲ ಸದ್ಗುಣವಂತನೆನಿಸಿ ವಿ |
ಶಾಲ ಭೂಮಂಡಲವನಾಳುವ |
ಕಾಲ ಹರಿದರ್ಶನ ಸುಯೋಗವು |
ಮೇಳವಿಸಿತವನಿಗೆ ವಿಶೇಷವು || ೧ ||

ನಿಶಿಯೊಳುಪವಾಸವನು ಆಚರಿಸಿ | ಏಕಾದಶೀ ದ್ವಾ |
ದಶಿಯ ವ್ರತವನು ಮಾಳ್ಪ ರಾಜರ್ಷಿ ||
ಅಸಮ ವೈಷ್ಣವರೆರೆಯ ಯಮುನೆಯ |
ವಶದೊಳಿಹ ಮರುಭೂಮಿಯಲಿ ಮುನಿ |
ಅಸಿತ ಗೌತಮ ಗುರುವಸಿಷ್ಠರ |
ಬೆಸಸಿ ತುರಗಾಧ್ವರವ ಗೈವವ || ೨ ||

ವಿಕ್ರಮದೊಳರಸರನು ಬೆನ್ನಟ್ಟಿ | ಲೋಕವನೆ ಗೆಲಿದಾ |
ಚಕ್ರವರ್ತಿಗೆ ಯಾರು ಸರಿಸಾಟಿ ||
ವಕ್ರಬುದ್ಧಿಯನರಿಯದಾತನು |
ಶಕ್ರಸಮನಿಂದಾ ಧರಿತ್ರಿಗೆ |
ನಕ್ರಹರನೊಲಿದಾ ಸುದರ್ಶನ |
ಚಕ್ರವನೆ ತೆಗೆದಿತ್ತನಾತಗೆ || ೩ ||

ಇಂದು ಪರಿಕಿಸಲವನು ಭೂಮೀಂದ್ರ | ಮುಂದೊಂದು ದಿನ ದೇ |
ವೇಂದ್ರನೆನಿಸನೆ ನೋಡು ದಿವಿಜೇಂದ್ರ ||
ಇಂದಿರಾಧವ ಮೆಚ್ಚಿದರೆ ಜನ |
ರಂದಗೆಡುವರೆ ಲೋಕದಲಿ ಹಾ |
ಗೆಂದು ಗುಣಿಯಲಿ ದೋಷವನು ನಾ |
ವೆಂದಿಗಾದರು ಕಾಣಲಾಗದು || ೪ || 30 ||

**ಭೈರವಿ - ಝಂಪೆ**
ಇಂತೆಂದು ನಾರದನು | ಕಂತುಪಿತನನು ನೆನೆದು |
ಮುಂತಾಹ ಪರಿಣಾಮ | ವೆಂತಿಹುದೊ ಎನುತ || ೧ ||

ತೆರಳಲಾಕ್ಷಣ ಸುರಪ | ಪರಿಭಾವಿಸುತಲೆಡರ |
ಪರಿಧಿ ಮೀರುವ ಮೊದಲೆ | ಪರಿಹರಿಪೆನೆನುತ || ೨ ||

ಭರವಸೆಯ ತಾಳಿರಲು | ಸುರಲೋಕದೆಡೆಗಾಗಿ |
ಭರದಿಂದ ಬಂದ ಮುನಿ | ವರನು ದುರ್ವಾಸ || ೩ || 33 ||

**ಕೇದಾರಗೌಳ - ಅಷ್ಟ**
ಇಣಿಕಿ ನೋಡುತ್ತ ಬಂದನು ಗುಣುಗುಣುಗುತ್ತ |
ಅನಿಮಿಷಾಧಿಪ ಬಳಲಿ ||
ಅನುಮಾನದಿಂದ ಕಾರಣವೇನೆಂದರಿಯದೆ |
ಮುನಿಯ ಸತ್ಕರಿಸುತ್ತಲಿ || ೧ ||

ಎರಗಲಾತನನೆತ್ತಿ ಸುರರೆರೆಯನ ಮೊಗ |
ಪರಿಕಿಸಿ ದುರ್ವಾಸನು ||
ಮರುಕವೇನೀಪರಿ | ಪರಿಹಾರವೊಂದ ನಾ |
ನೊರೆವೆನೆಂದೆನೆ ಶಕ್ರನು || ೨ || 35 ||

**ಸುರುಟಿ - ಏಕ**
ಲಾಲಿಸು ಮುನಿವರ್ಯ | ಮನದೊಳು |
ತಾಳಿದ ಯೋಚನೆಯ ||
ಕೇಳು ನಭಾಗನ | ಬಾಲಕನಿಗೆ ಸಮ |
ಪಾಳಿಯಹನ ನೀ | ಕಾಲದಿ ಕಾಣೆನು || ೧ ||

ತುರಗಾಧ್ವರ ಗೈದು | ಸಂತತ |
ಹರಿದಿನ ವ್ರತವಿಡಿದು ||
ಹರಿಯನೊಲಿಸಿ ಸು | ದರುಶನ ಚಕ್ರವ |
ಕರಗತ ಮಾಡಿದ | ಧರಣಿಪಗಾರೆಣೆ || ೨ ||

ಅಂಬರೀಷ ನೃಪನ | ಹರಿ ಅವ |
ಲಂಬಿಸಲೀತೆರನ ||
ಮುಂಬಹ ಕಾರ್ಯಕೆ | ಬೆಂಬಲಕಾರೆಮ |
ಗೆಂಬ ಮನೋವ್ಯಥೆ | ತುಂಬಿದೆ ಮನದಲಿ || ೩ || 38 ||

**ಭಾಮಿನಿ**
ಖಗವರೂಥನು ವರಸುದರ್ಶನ |
ತೆಗೆದು ನೃಪಗಿತ್ತಿರೆ ವಿರೋಧವ |
ಬಗೆದು ದೈತ್ಯರು ಬಂದರೇನನು ಮಾಳ್ಪೆನೆಂದೆರಗೆ ||
ವಿಗಡ ಮುನಿ ಸಂತವಿಸಿ ಸುರಪನ |
ಬಿಗಿದ ಚಿಂತೆಯನರಿತ ಮೇಲಕೆ |
ಲಗುಬಗೆಯೊಳೈತಂದನಾ ನೃಪನಿಲಯದೆಡೆಗಾಗಿ || ೧ || 39 ||

**ಸೌರಾಷ್ಟ್ರ - ತ್ರಿವುಡೆ**
ಅತ್ತಲಾ ದ್ವಾದಶಿಯ ದಿನ ನೃಪ |
ಸತ್ತಮನು ಮಾಧವನ ಸ್ಮರಣೆಯ |
ಚಿತ್ತದಲಿ ನೆಲೆಗೊಳಿಸಿ ಸೇವಾ | ವೃತ್ತಿಯಿಂದ || ೧ ||

ಕರೆಸಿ ವಿಪ್ರೋತ್ತಮರನುರೆ ಸ |
ತ್ಕರಿಸಿ ಧನ ಕಾಂಚನ ಸುವಸ್ತ್ರವ |
ಸುರಭಿಗಳ ಕಾಣಿಕೆಯನಿತ್ತನು | ಹರಿದಿನದೊಳು || ೨ ||

ಸತ್ಯರತ ಸುಖದು:ಖದಲಿ ಸಾಂ |
ಗತ್ಯವನು ಸಾಧಿಸುತಲಾ ಪುರು |
ಷೋತ್ತಮನ ಪೂಜಿಸಿದ ಬಳಿಕ ದ್ವಿ | ಜೋತ್ತಮರನು || ೩ ||

ಆದರಿಸಿ ಸಂತರ್ಪಣೆಯ ಮೇ |
ಲಾದಿ ನಾರಾಯಣನ ಪದಕಮ |
ಲೋದಕವ ಸೇವಿಸುವೆನೆಂದಿರೆ | ಕಾದು ನಿಂದ || ೪ || 43 ||

**ಕಾಂಬೋಧಿ - ಝಂಪೆ**
ವಿಕಟಮುನಿ ದುರ್ವಾಸ ಪ್ರಕಟಗೊಂಡನು ಶಿಷ್ಯ |
ನಿಕರವನು ಕೂಡುತ್ತಲಾಗ ||
ಅಕಲಂಕ ಚರಿತ ಗುರು | ಭಕುತಿಯಿಂದೆರಗಿ ಮುನಿ |
ಪ್ರಕರವನು ಸತ್ಕರಿಸಿ ಬೇಗ || ೧ ||

ಕೇಶವನ ವ್ರತದೀಕ್ಷೆಯಾ ಸಮಯ ಬಂದ ದು |
ರ್ವಾಸಮುನಿಗೆರಗಿ ರಾಜೇಂದ್ರ ||
ಏಸು ಧನ್ಯನೊ ಎನುತ ಭೂಸುರೋತ್ತಮ ಸಹಿತ |
ರಾಶಿ ಶಿಷ್ಯರ ನೋಡುತೆಂದ || ೨ ||

ಹರಿದಿನದ ಪಾರಣೆಗೆ ಭರದಿ ಮನಮಾಡಿರೆನ |
ಲರಿತು ಕರ್ಮಾಂಗಗಳನೆಸಗಿ ||
ತ್ವರೆಯೊಳೈತಹೆವೆಂದು ತೆರಳಲಾ ದುರ್ವಾಸ |
ಪರಿಭಾವಿಸಿದ ನೃಪತಿ ಮನದಿ || ೩ || 46 ||

**ವಾರ್ಧಕ**
ಉಳಿದುದೊಂದೇ ಗಳಿಗೆ ದ್ವಾದಶಿಯ ತಿಥಿಯೊಳೀ |
ಗಲೆ ಸಂದುದದರರ್ಧವಾ ಸಮಯದಲಿ ಮುನಿಪ |
ಸಲಿಲ ಸ್ನಾನವಗೈದು ಬರಲೊಲ್ಲ ಅದರಿಂದ ಬಹುದು ವ್ರತಭಂಗ ದೋಷ ||
ಒಲಿದು ಬಂದವನ ಧಿಕ್ಕರಿಸಿ ಪಾರಣೆ ಗೈಯೆ |
ಫಲ ಕೊಡದು ದ್ವಿಜರತಿಕ್ರಮ  ಪಾಪದಿಂ ವ್ರತವು |
ಮುಳಿದು ಶಪಿಸಿದರೇನಗೈವುದೆಂದವನೀಶ ಚಿಂತಿಸಲು ಗುರುವಸಿಷ್ಠ || ೧ || 47 ||

**ಸಾರಂಗ - ಅಷ್ಟ**
ಕೇಳಯ್ಯ ಅಂಬರೀಷ || ನೀ ಸುಮ್ಮನೆ |
ತಾಳದಿರಯ್ಯ ಕ್ಲೇಶ ||
ಗೋಳುಗುಟ್ಟಿಸುವಂಥ | ಗೀಳುಳ್ಳ ಮುನಿಪನು |
ಶೂಲಿ ಸನ್ನಿಭ ನಿನ್ನ | ಗೋಳಾಡಿಸದೆ ಬಿಡ || ೧ ||

ತಿಥಿಯಂತಿಮದ ಗಳಿಗೆ | ಮೀರುತಲಿದೆ |
ವ್ಯಥಿಸದಿರಯ್ಯ ಹೀಗೆ ||
ವ್ರತ ನಿಯಮವ ಪಾಲಿ | ಸುತಲುದಕವ ಕೊಂಡ |
ರತಿಕ್ರಮವಾಗದು | ಶ್ರುತಿಸಮ್ಮತವಿದೆಂದ || ೨ || 49 ||

**ಸೌರಾಷ್ಟ್ರ - ತ್ರಿವುಡೆ**
ಗುರು ವಸಿಷ್ಠರ ಮತದೊಳಾ ನೃಪ |
ನರಿತು ಪರಿಹಾರವನು ಶೀಘ್ರದಿ |
ಸುರಿದು ಜಲವ ಕರಾಂಜಲಿಯೊಳದ | ಭರದೊಳುಣಲು || ೧ ||

ಚಂಡ ಮುನಿ ನಡೆತಂದ ಭೋಜನ |
ಕೊಂಡ ನೃಪನೆಂದೆಂಬ ನೆವದಲಿ |
ದಂಡಿಸಲು ಮುಂದಾಗಲವನು | ದ್ದಂಡವೆರಗಿ || ೨ || 51 ||

**ತೋಡಿ - ಅಷ್ಟ**
ಲಾಲಿಸು | ಮಾತ | ಲಾಲಿಸು || ಪ ||
ಕಾಲಕಾಲದೊಳಾಹ ವ್ರತದ ಕಾರಿಯವ |
ಪಾಲಿಸಲೆಂದು ಸೇವಿಸಿದೆ ನಾ ಜಲವ || ಅ.ಪ. ||
ಸತತ ನಾವೆಲ್ಲರು ಹರಿಭಕ್ತರೈಸೆ |
ವ್ರತಭಂಗವಾಗಲು ಬಾರದೆಂಬಾಸೆ ||
ಅತಿ ವಿನಯದೊಳು ಬೇಡಿಕೊಳ್ಳುವೆನು |
ಖತಿಯ ತಾಳದಿರೆನ್ನಲಾ ಯತಿವರನು ||  52 ||

**ಸೌರಾಷ್ಟ್ರ - ತ್ರಿವುಡೆ**
ಮುರಿದು ಹುಬ್ಬನು ತೆರೆದು ನಯನವ |
ತಿರುಗಿಸುತ ಕಣ್ಣಾಲಿಗಳ ಗರ |
ಗರನೆ ಕ್ರೋಧಾವೇಶದಿಂದಲಿ | ಕೆರಳಿ ನಿಂದ || ೧ ||

ಕಂಗಳಲಿ ಕಿಡಿಗೆದರಿ ಎಡಗಾ |
ಲುಂಗುಟದೊಳೊದೆದನು ನೃಪಾಲನ |
ಭಂಗಿಸುತ ನಿಂದಿರಲು ಭುಜಗಳ | ಹೊಂಗಿಸುತ್ತ || ೨ || 54 ||

**ಭೈರವಿ - ಝಂಪೆ**
ಕಂಡುನೃಪನರಸಿ ಮುಂ | ಕೊಂಡು ಪದಕಭಿನಮಿಸಿ |
ಕೊಂಡಾಡುತೆಂದಳಾ | ಚಂಡಮುನಿಯೊಡನೆ || ೧ ||

ಬೇಡಿಕೊಂಬೆನು ಬರಿದೆ | ಕಾಡದಿರು ಈ ಬಗೆಗೆ |
ರೂಢಿಪಾಲಕ ಗೈದ | ಕೇಡೇನು ನಿನಗೆ || ೨ || 56 ||

**ಸೌರಾಷ್ಟ್ರ - ತ್ರಿವುಡೆ**
ಸಮರಸದ ಆರೋಗಣೆಗೆ ಸಂ |
ಯಮವ ತೋರುತ ಬರಲು ನೃಪನಾ |
ನಿಮಿಷದಲಿ ನೀರ್ಗುಡಿದು ಹಸಿವನು | ಶಮನ ಗೈದ || ೧ ||

ಮಾಡಿದಪರಾಧವನು ಮನ್ನಿಸಿ |
ನೀಡದುಳಿದರೆ ದಂಡನೆಯನದು |
ವಾಡಿಕೆಯದಹುದಿನ್ನು ಮುಂದಕೆ | ರೂಢಿಯೊಳಗೆ || ೨ ||

ಯೋಗಿಗಳ ಯೋಗ್ಯತೆಯನರಿತಾ |
ಭೋಗಿಶಯನನು ಭೃಗು ಮಹರ್ಷಿಯ |
ರೇಗಿಸದೆ ಎದೆಗೊದೆದ ಪಾದಕೆ | ಬಾಗಿ ನಿಂದ || ೩ || 59 ||

**ಭಾಮಿನಿ**
ಎನುತಲಂತಕ ಕಾಲರುದ್ರರ |
ಘನ ವಿಕಾರವ ತಳೆದು ಮುನಿಪತಿ |
ಕನವರಿಸಿ ತನ್ನೊಡುಗಳನುರೆ ಕಡಿಯುತಡಿಗಡಿಗೆ ||
ಕನಲಿ ಹೂಂಕರಿಸುತ್ತ ಜಡೆಯಲಿ |
ಹೆಣೆದ ಕೂದಲನೆಳೆದು ಮಂತ್ರಿಸಿ |
ಜನಪನನು ತೆಗೆ ಎನುತಲೆಸೆದನು ಧರೆಯೊಳಾಕ್ಷಣವೆ || ೧ || 60 ||

**ಮಾರವಿ - ಏಕ**
ಭುಗಿಭುಗಿಲೆನ್ನುತ ಉಗುಳುತ ಕಿಡಿ ಕಾ|
ರ್ಬೊಗೆಯೆದ್ದುದು ನೆಲದಿ ||
ಒಗೆಯುವ ತಾಪಕೆ ಖಗ ಸಂತತಿ ಧಗ |
ಧಗಿಸಿತು ಅಂಬರದಿ || ೧ ||

ಭೂರಿ ಕರಾಳ ಶರೀರಿಯು ನಿಂದನು |
ಮೇರುವಿನಂದದಲಿ ||
ಆರುಭಟಿಸಿ ಹುಬ್ಬೇರಿಸಿ ರೋಷವ |
ತೋರುತ ಮೋರೆಯಲಿ || ೨ ||

ಗುಡುಗುಡುಗುತ ನಡೆತರಲಾ ಮುನಿಪನು |
ಪೊಡವಿಪನನು ಹಿಡಿದು ||
ಕೆಡೆಹೆನಲಾಕ್ಷಣ ನಡುಗಿದರೆಲ್ಲರು |
ಕಡೆಗೇನಹುದೆಂದು || ೩ || 63 ||

**ಭಾಮಿನಿ**
ಪಾವಕನ ಸೃಷ್ಟಿಸಿದ ಮಾಯಾ |
ದೇವಿಯರಸನ ಮುಂದೆ ನಿಲುವವ |
ನಾವನೆಂದು ವಿಕಾರಗೊಳದೆ ತದೇಕ ಚಿತ್ತದಲಿ ||
ಭೂವರನು ಭರವಸೆಯೊಳಿರೆ ಪರಿ |
ಭಾವಿಸುತ ಹರಿಯಾಜ್ಞೆಯನು ಬಂ |
ದಾ ವರೇಣ್ಯ ಸುದರ್ಶನನು ತಡೆದೆಂದ ಕೃತ್ಯನನು || ೧ || 64 ||

**ಭೈರವಿ - ಏಕ**
ಫಡ ಫಡ  ಕೃತ್ರಿಮ ಪುರುಷ | ನಿ |
ನ್ನೊಡಲಲಿ ಅಡಗಿದೆ ದ್ವೇಷ ||
ಪೊಡವಿಪಗೀಯದೆ ಕ್ಲೇಶ | ಹಿ |
ನ್ನಡೆ ದುರ್ವಾಸನ ದಾಸ || ೧ ||

ಎಣಿಸದೆ ದುರ್ವಾಸನನು | ಅವ |
ಗಣಿಸಿದ ದುಷ್ಕರ್ಮಿಯನು ||
ಕ್ಷಣದಲಿ ನಾ ಸುಟ್ಟಪೆನು | ಉರ |
ವಣಿಸದೆ ಮುನಿಯಾಜ್ಞೆಯನು || ೨ ||

ಹುಟ್ಟಡಗಿಸುವೆನು ನಿನ್ನ | ಬಳಿ |
ಕಟ್ಟಿದವನ ಬಿಡೆ ಬೆನ್ನ ||
ಹುಟ್ಟಿಸಿದಾತಗೆ ತಿಳಿಸು | ಗುರು |
ಗುಟ್ಟದೆ ತೆರಳಲು ಲೇಸು || ೩ ||

ಕೇಶವನಂಕೆಯ ತೊರೆದು | ನೃಪ |
ನಾಸರೆ ಹೊಂದಿದ ಕೈದು ||
ದೂಷಿಸಲೀಪರಿ ಮುಳಿದು | ಮುನಿ |
ಘಾಸಿಯ ಗೈವನು ಮುನಿದು || ೪ || 68 ||

**ಭಾಮಿನಿ**
ಇಂತೆನಲು ಕೋಪಿಸುತಲಾ ಶ್ರೀ |
ಕಾಂತನಾಯುಧವೆರಗಿ ಕೃತ್ಯನ |
ಅಂತ್ಯಗೊಳಿಸಲು ಕಾಣುತಾ ದುರ್ವಾಸ ಚಿಂತೆಯಲಿ ||
ಅಂತರಂಗದೊಳರಿತು ತನಗ |
ತ್ಯಂತ ದುರ್ವಿಧಿ ಬಹುದೆನುವ ಸಂ |
ಭ್ರಾಂತಿಯಿಂದೋಡುತಿರೆ ಬೆಂಬತ್ತಿತು ಸುದರ್ಶನವು || ೧ || 69 ||

**ಕೇದಾರಗೌಳ - ಝಂಪೆ**
ಬದಲಾದ ದೈವಗತಿಯ | ಎಣಿಸುತ್ತ |
ಉದಧಿಯಲಿ ಹೊಕ್ಕ ಮರೆಯ ||
ಬೆದರಿ ಸುರಗಿರಿಯ ನೇರ್ದ | ಅಲ್ಲಿರದೆ |
ಮುದುಡಿ ಗುಹೆಯೊಡಲ ಸೇರ್ದ || ೧ ||

ಅತಳ ವಿತಳದೊಳರಸಿದ | ಸುಸ್ಥಳವ |
ಸುತಳ ಪಾತಾಳಕಿಳಿದ ||
ಗತಿಯ ಕಾಣದೆ ಬಳಲಿದ | ನಿರ್ಜರಾ |
ವತಿಯ ಕಡೆಗಾತ ನಡೆದ  || ೨ || 71 ||

**ಸೌರಾಷ್ಟ್ರ - ತ್ರಿವುಡೆ**
ಎಲೆ ಸುರಪ  ನೋಡಲ್ಲಿ ಚಕ್ರವು |
ಬಳಸಿ ಬಂದೀಗೆನ್ನ ಕೊಲುವುದು |
ಕುಲಿಶ ಬಲದಲಿ ನಿಗ್ರಹಿಸಿ ನೀ | ನುಳುಹು ಅಸುವ || ೧ ||
ಭೃಗು ಮುನಿಯ ಮೇಲೆರಗಿ ಪ್ರಾಣವ |
ತೆಗೆಯಲೆಳಸಿದ ಚಕ್ರ ಧರ್ಮದ |
ಬಗೆಯನರಿಯುವುದುಂಟೆ ಕೊಲುಕೊಲು | ಹಗೆಯನೀಗ || ೨ ||  73 ||

**ಮಧುಮಾಧವಿ - ಅಷ್ಟ**
ಲಾಲಿಸು ನಾನೆಂಬ ನುಡಿಯ ಮುನೀಂದ್ರ | ಆ ಶ್ರೀ |
ಲೋಲನ ಚಕ್ರ ನಿಗ್ರಹವೆನ್ನಿಂದ ||
ಆಲೋಚಿಸಲು ಬಾರದಂತಹ ಕಾರ್ಯ | ನೀನು |
ಪೇಳಲಾಗದು  ಯೋಚಿಸದೆ ಎನ್ನ ನೆಲೆಯ  || ೧ ||

ಪರರ ರಕ್ಷಣೆಯಲ್ಲಿ ಇರುವವರಾವು | ಕೇಳಾ |
ಹರಿಯ ವಿರೋಧವು ಬಲು ಕಷ್ಟಕರವು ||
ಹರನ ಹೋಲುವ ಮೌನೀವರನಿಗಿಂತಾಗೆ | ಮಿಕ್ಕ |
ವರ ಗತಿಯೇನೆಂಬ ವ್ಯಥೆ ಮನದೊಳಗೆ || ೨ || 75 ||

**ಭೈರವಿ - ಝಂಪೆ**
ವಾಸವನ ನುಡಿ ಕೇಳಿ | ಭೂಸುರೋತ್ತಮ ಬಂದ |
ನಾಶಿಸುತ ನೆರವ ಕಮ | ಲಾಸನನ ಬಳಿಗೆ || ೧ ||

ಆ ಸುದರ್ಶನ ತನ್ನ | ಘಾಸಿಗೊಳಿಪಾ ಬಗೆಗೆ |
ಬೇಸರಿಸುತೆರಗೆ ಚತು | ರಾಸ್ಯನಡಿಗಳಿಗೆ || ೨ || 77 ||

**ಘಂಟಾರವ - ರೂಪಕ**
ಅತ್ರಿ ಸಂಭವ ವ್ಯರ್ಥ ಕಲಹವ |
ಎತ್ತಿ ಶಪಿಸುವ | ವೃತ್ತಿಯುಳ್ಳವ ||
ಸುತ್ತಿ ಲೋಕವ | ಮತ್ತೆ ನಾಕವ |
ಇತ್ತ ಬಂದುದು ವ್ಯರ್ಥವಾಯಿತು || ೧ ||

ಹರಿಯ ಶರಣನ | ತರಿವ ದುರ್ಮನ |
ಇರಿಸಿದಾತನ | ಪೊರೆವೆನೆಂತು ನಾ ||
ಹರ ಸಮರ್ಥನು | ತೆರಳುತವನನು |
ಮರೆಯ ಸೇರೆನೆ | ಭರದಿ ಬಂದನು || ೨ || 79 ||

**ತುಜಾವಂತು - ಝಂಪೆ**
ಜಯ ಉಮಾಧವ ದೇವ | ಜಯ ಭಕುತರನು ಕಾವ |
ಭಯನಿವಾರಕನಾದ ಜಯ ಗರಲಗ್ರೀವ ||
ಹರಿ ಸುದರ್ಶನವೆನ್ನ | ಬಿಡದಟ್ಟುವುದು ಬೆನ್ನ |
ಶರಣು ಬಂದಿಹೆ ನಿನ್ನ | ಪೊರೆ ದಯಾಪೂರ್ಣ || ೧ || 80 ||

**ಕೇದಾರಗೌಳ - ಅಷ್ಟ**

ಯತಿಪ ದುರ್ವಾಸನೆ ಖತಿಗೊಳ್ಳದಿರು ಯಥಾ |
ಸ್ಥಿತಿಯ ನಾ ಪೇಳಲಿಂದು ||
ಮತಿ ಮರೆಯುತ ನೀ ವರ್ತಿಸಿದೆ ನಾಭಾಗನ |
ಸುತನ ಮೇಲೇತಕಿಂತು || ೧ ||

ಹರಿಶರಣನ ಗುಣವರಿಯದೆ ಸುಮ್ಮನೆ |
ಕೆರಳಿದೆ ಕೋಪದಲಿ ||
ಶರಣವತ್ಸಲ ರಮಾಧವನ ಭಕ್ತನ ಮುಂದೆ |
ಕಿರಿದಾದೆ ಇಂದಿನಲಿ || ೨ ||

ತೂಗಿ ನೋಡದಿರೆಮ್ಮನೊಂದೇ ತುಲೆಯಲಿ |
ಸಾಗದ ಕಾರ್ಯವದು ||
ಬೇಗನೆ ಹರಿಯೆಡೆಗೈದುತ್ತ ಭಯವ ಸ |
ರಾಗದಿಂ ಬಗೆಹರಿಸು || ೩ ||

ಬಿಸುಸುಯ್ಯುತಾ ಮುನಿ ಬಿಸಕಂಧರನಿಗೆ ವಂ |
ದಿಸುತಲೀ ಹದನವನು ||
ಬೆಸಸುವೆ ಹರಿಯೊಳೆಂದುಸುರುತ್ತ ಪೊಕ್ಕನಾ |
ಎಸೆವ ವೈಕುಂಠವನು || ೪ || 84 ||

**ಸೌರಾಷ್ಟ್ರ - ತ್ರಿವುಡೆ**

ವಾಸುಕಿಯ ಹಾಸಿಗೆಯ ಮೇಲೆ ವಿ |
ಲಾಸದಿಂದೊರಗಿರಲು ಚರಣವ |
ತೋಷದಿಂ ರಮೆಯೊತ್ತುತಿರೆ ಮಾ | ನೀಶ ಬಂದ || ೧ ||

ಎಳೆ ತುಳಸಿ ವನಮಾಲೆ ಕೊರಳಲಿ |
ಹೊಳೆವ ಕೌಸ್ತುಭ ಹಾರ ಎದೆಯಲಿ |
ನಲಿವ ಜೋಲುವ ಕುಂಡಲವ ಕಿವಿ | ಗಳಲಿ ಧರಿಸಿ || ೨ ||

ಯೋಗ ನಿದ್ರೆಯೊಳಿರುವ ಹರಿಯೆಡೆ |
ಗಾಗಮಿಸಲೊಡನೆದ್ದು ಬಂದು ವಿ |
ರಾಗಿ ದುರ್ವಾಸನನು ನುಡಿಸಿದ | ರಾಗದಿಂದ || ೩ || 87 ||

**ಕಲ್ಯಾಣಿ - ಅಷ್ಟ**

ಅತ್ರಿ ನಂದನನೆ ಪೇಳು | ಧಾವಿಸಿ ಬಂದ |
ವರ್ತಮಾನವನೆನ್ನೊಳು ||
ಚಿತ್ತದಲಿ ಕೊರಗುತ್ತಲೀಪರಿ |
ಅರ್ತಿಯಿಂದೀಗೆನ್ನ ಕಾಣಲು |
ಇತ್ತ ಬಂದಿಹ ಕಾರಣವ ನೀ |
ನುತ್ತರಿಸಬೇಕೆಂದ ಮಾಧವ || ೧ ||

ಅಂಬರೀಷನೊಳು ನಾನು | ಸುಮ್ಮನೆ ವೈರ |
ಬಿಂಬಿಸುತುರೆ ಸೋತೆನು ||
ಅಂಬುಜಾಕ್ಷನೆ ಭೋಜನವ ಕೈ |
ಕೊಂಬ ನೆವನದಿ ನಿನ್ನನೇ ನೆರೆ |
ನಂಬಿದಾತನ ಮೇಲೆ ಮುನಿಯಲು |
ಬೆಂಬಳಿಸಿ ಬಹನಾ ಸುದರ್ಶನ || ೨ ||

ಮನ್ನಿಸೆನ್ನಪರಾಧವ | ಸದ್ಭಾವ ಸಂ |
ಪನ್ನ ತೋರೈ ದಯವ ||
ಬೆನ್ನಟ್ಟುವ ಚಕ್ರಹತಿಯಿಂ |
ದೆನ್ನನುಳುಹಲು ನೀ ಸಮರ್ಥನು |
ಅನ್ಯರಿಲ್ಲೆನಗೆನುತಲಾ ಮುನಿ |
ಸನ್ನುತಿಸುತೆಗೆರಗಿದನು ಚರಣಕೆ || ೩ || 90 ||

**ಕಾಂಬೋಧಿ - ಝಂಪೆ**
ಕೇಳು ಮುನಿಕುಲತಿಲಕ ಪೇಳುವೆನು ನಾಭಾಗ |
ಬಾಲಕನು ವ್ರತವನಾಚರಿಸೆ ||
ಮೇಲುವಾಯ್ದವನ ಕೊಲಲಾಲೋಚಿಸುತ ಕೆಟ್ಟ |
ಚಾಳಿಯನು ತೋರಿ ಹಾಳಾದೆ || ೧ ||

ಜ್ಞಾನ ತಪವೆರಡರಲಿ ನೀನು ಮೇಲಾಗಿರುವೆ |
ಮಾನಿಸುವರದಕೆ ಬೆಲೆಯಿರಿಸಿ ||
ಕ್ಷೀಣಿಸಲು ಘನತೆ ವ್ಯವಧಾನ ಸದ್ಗುಣ ವಿನಯ |
ಹೀನತೆಯೆ  ಕಾರಣವು ತಪಸಿ || ೨ ||

ತನ್ನ ಮಗುವಳುತಿರಲು ಸ್ತನ್ಯಪಾನವ ನೀಡ |
ದುಣ್ಣುವಳೆ ತಾಯಿ ಹಸಿವಿನಲಿ ||
ಎನ್ನ ಭಕುತನು ಬಳಲಿ ಬನ್ನಬಡುತಿರೆ ನಿನ್ನ |
ಬಿನ್ನಪವನೆಂತು ಮನ್ನಿಸಲಿ || ೩ ||

ಶರಣನೀ ಪರಿಯಿಂದ ಕೊರಗುತಿರೆ ನಿನಗೆ ನಾ |
ನೆರವಾಗಲೆನಗೆ ಕೊರತೆಗಳು ||
ಬರುವುದಾ ಕಾರಣದಿ ಮರೆಯಸೇರಾ ನೃಪನ |
ಭರದೊಳೆನೆ ಹರಿಯು ವಹಿಲದೊಳು || ೪ || 94 ||

**ಭಾಮಿನಿ**
ಪಾರಣೆಯ ನೆವದಿಂದ ಬಂದಾ |
ಧಾರಿಣೀ ಪಾಲಕನ ಜರೆದು ಪ |
ಚಾರಿಸಿದ ಕೃತಿಗಿದುವೆ ಪ್ರಾಯಶ್ಚಿತ್ತವೆಂದರಿತು ||
ಭೋರನೈತಂದಂಬರೀಷನ |
ಚಾರು ಪದಗಳಿಗೆರಗಿ ಉಪಸಂ |
ಹಾರ ಮಾಡೆಂದಂಗಲಾಚಿದನಾ ಮುನೀಶ್ವರನು || ೧ || 95 ||

**ಸೌರಾಷ್ಟ್ರ - ತ್ರಿವುಡೆ**
ಕ್ಷಿಪ್ರದಿಂ ಹಿಂಜರಿದು ಭೂಪತಿ |
ಅಪ್ರಿಯದ ನಡವಳಿಕೆಯೇನಿದು |
ವಿಪ್ರಮುಖದಲ್ಲಿರುವವನೆ ಕಂ | ದರ್ಪ ಜನಕ || ೧ ||

ನಿಮ್ಮಡಿಗೆ ತಲೆವಾಗುವವರಾ |
ವೆಮ್ಮನೀಪರಿ ನಾಚಿಸದಿರೆಂ |
ದುಮ್ಮಳಿಪ ದುರ್ವಾಸಗೆರಗಿದ | ಧಿಮ್ಮನೆದ್ದು || ೨ || 97 ||

**ಕೇದಾರಗೌಳ ಝಂಪೆ**
ಅನಿತರೊಳು ಬೆಂಬತ್ತುತ | ಆ ಸುದ |
ರ್ಶನವು ಗುರುಗುರುಗುಟ್ಟುತ ||
ಮುನಿಯ ಸರಿಸಕೆ ಹಾಯಲು | ಎಣಿಸುತಿರೆ |
ಜನಪನೆಂದನು ನಯದೊಳು || ೧ || 98 ||

**ಮಧ್ಯಮಾವತಿ - ಅಷ್ಟ**
ಕೇಳು ಸುದರ್ಶನ ದೇವ ವರೇಣ್ಯ |
ತಾಳದೆ ರೋಷವ ತೋರು ಕಾರುಣ್ಯ ||
ಮೇಲುವಾಯದಿರೀಗ ದ್ವಿಜರ ಸಂಹರಣ |
ಶ್ರೀಲೋಲನೊಲ್ಲದ ಕಾರ್ಯನಿರ್ವಹಣ || ೧ ||

ಬಾಲನ ಸಂರಕ್ಷಿಸುವ ಕಾರ್ಯಾರ್ಥದಲಿ |
ಬಾಲಕನಯ್ಯನ ಕೊಲಲು ಮುಂದಿನಲಿ ||
ಬೀಳುಗೊಳ್ಳುವುದು ಧರ್ಮವು ರಾಜ್ಯದಲ್ಲಿ |
ಮೇಲೆ ನಾ ಬಾಳುವೆನೆಂತು ಸೌಖ್ಯದಲಿ || ೨ ||

ಅನುಮಾನಿಸದೆ ಎನ್ನ ತಲೆಯನೀಗಾಡು |
ಮುನಿಪ ದುರ್ವಾಸನ ಶಿರವ ಕಾಪಾಡು ||
ಎನುತ ಭಕ್ತಿಯಲಿ ಬಂದೆರಗಲು ನೃಪನು |
ಸನುಮತಿಸುತ್ತ ಹಿಂದಿರುಗಿದನವನು || ೩ || 101 ||

**ಮಧುಮಾಧವಿ - ತ್ರಿವುಡೆ**
ಚಕ್ರ ರಕ್ಷಿತನೀ ಪರಿಯೊಳಾ |
ವಕ್ರಬುದ್ಧಿಯ ಮುನಿಪನನು ಸಂ |
ರಕ್ಷಿಸಲು ನಾಭಾಗ ಸುತನನು |
ಈಕ್ಷಿಸುತಲಿಂತೆಂದನು || ೧ ||

ಕೇಡ ಬಗೆದವನೊಡನೆ ಹಗೆತನ |
ಮಾಡಿಕೊಳ್ಳದೆ ಎನ್ನನುಳುಹಿದ |
ರೂಢಿಪಾಲಕ ನಿನ್ನ ಗುಣವನು |
ಹಾಡುತಿರಲನುಗಾಲವು || ೨ ||

ಧರ್ಮ ಮಾರ್ಗವ ಬಿಡದೆ ಮನದಲಿ |
ಬೊಮ್ಮನಯ್ಯನ ನೆನೆವ ಭಕುತನ |
ಸಮ್ಮಿಲನದಿಂದಾದುದಿಂದಿಗೆ |
ಜನ್ಮ ಸಫಲತೆ ಎಂದನು || ೩ ||

ಭಕುತಿ ಹರಿವ್ರತ ಮಹಿಮೆಗಳು ಈ |
ಪ್ರಕರಣದ ದೆಸೆಯಿಂದ ಲೋಕಕೆ |
ಪ್ರಕಟಗೊಂಡಾ ಕಾರಣದಿ ಸಂ |
ಕಟವಗೊಳ್ಳುವುದುಚಿತವೆ || ೪ || 105 ||

**ಸಾವೇರಿ - ಅಷ್ಟ**
ಇಂತೆಂಬ ಮುನಿವರನ | ಮನ್ನಿಸುತ ಭೂ |
ಕಾಂತನಿತ್ತನು ಭೋಜನ ||
ಸಂತೋಷದಿಂದ ತಾ | ನಾಂತು ಸತ್ಕಾರ ಮಾ |
ಕಾಂತನ ಕೊಂಡಾಡುತ || ಸಾಗಿದನತ್ತ || ೧ ||

ಭೂರಿ ಸಂತಸವಾಂತನು | ಭೂಪಾಲನು |
ಪಾರಣೆಯನು ಗೈದನು ||
ವಾರಿಜನಯನ ಅ | ಪಾರ ಕಾರುಣ್ಯವ |
ಬೀರಿದ ಮೇಲಿನ್ನೇನು || ಎನ್ನುತ ತಾನು || ೨ || 107 ||

**ನಾಟಿ - ಝಂಪೆ**
ಗರುಡಕೇತನ ಸುದರ್ಶನ ಚಕ್ರಧರನಾದ |
ಮುರಮಥನ ಕಾಳಿಂಗ ಮರ್ದನನಿಗೆ ||
ವರದಿವ್ಯ ಕೌಸ್ತುಭವ ಧರಿಸಿ ಕಣಿಪುರದಲ್ಲಿ |
ಮೆರೆವ ಶ್ರೀ ಕೃಷ್ಣನಿಗೆ ದನುಜಾರಿಗೆ ||
ಜಯ ಮಂಗಲಂ ನಿತ್ಯ ಶುಭ ಮಂಗಲಂ || 108 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಸಂಕರ್ಷಣ ಪ್ರಕಾಶನ, ಮಧೂರು

**ಪ್ರಸಂಗ ಪ್ರತಿ ಆಧಾರ:** ಸಂಕರ್ಷಣ ಪ್ರಕಾಶನ, ಮಧೂರು ಇವರಿಂದ ಪ್ರಕಟಿತ ಪ್ರಸಂಗ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಸುಬ್ರಹ್ಮಣ್ಯ ಭಟ್ ಕಜೆ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಸುಬ್ರಹ್ಮಣ್ಯ ಭಟ್ ಕಜೆ

**ಅಂತರಜಾಲ ಪ್ರತಿ ಬರವಣಿಗೆ:** ವಸುಮತಿ ಜಿ.

**ಅಂತರಜಾಲ ಪ್ರತಿ ವಿನ್ಯಾಸ:** ರವಿ ಮಡೋಡಿ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ